ಒ.ಎಸ್. ನಂ.20 ಃ 2016
ಪಿಡಬ್ಲೂ-1

ದಿನಾಂಕ 15.06.2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಕೆ.ಪಿ.ಬಿ. ಪಾಟೀಲ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಅಂಗವಾಗಿ ಇಂದು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದರಲ್ಲಿ ಎಲ್ಲ ವಿಷಯಗಳು ತಿಳಿದ ನಂತರ ನಾನು ಸಹಿ ಮಾಡಿರುತ್ತೇನೆ. ನಾನು ಹಾಜುರುಪಡಿಸಿದ ದಾಖಲೆಗಳನ್ನು ನಿಶಾನೆ ಮಾಡಲು ವಿನಂತಿ ಇರುತ್ತದೆ.

ಎಂ.ಆರ್. ನಂ.ಹೆಚ್-57 ನ್ನು ನಿಪಿ-1 ಎಂದು, ಎಂ.ಆರ್. ನಂ.ಹೆಚ್-57 ರ ಪ್ರತಿಯನ್ನು ನಿಪಿ-2 ಎಂದು, ದಿನಾಂಕ 10.09.2014 ರಂದು ಪಡೆದ ಸ್ವೀಕೃತಿ ಪ್ರತಿಯನ್ನು ನಿಪಿ-3 ಎಂದು, ಕೌಟುಂಬಿಕ ವಾಟ್ನಿ ಒಡಂಬಡಿಕೆ ದೃಡಿಕೃತ ಪ್ರತಿಯನ್ನು ನಿಪಿ-4 ಎಂದು, ಒಪ್ಪಿಗೆ ಪತ್ರವನ್ನು ನಿಪಿ-5 ಎಂದು, ನಮೂನೆ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ-6 ಎಂದು, ಪೋಡಿ ನಕಾಶೆಯ ದೃಡೀಕೃತ ಪ್ರತಿಯನ್ನು ನಿಪಿ-7 ಎಂದು, ವಂಶಾವಳಿ ದೃಡೀಕೃತ ಪ್ರತಿಯನ್ನು ನಿಪಿ-8 ಎಂದು, ತಹಸೀಲ್ದಾರ ಅಫಜಲಪೂರ ರವರಿಗೆ ನೀಡಿದ ಅರ್ಜಿಯ ದೃಡೀಕೃತ ಪ್ರತಿಯನ್ನು ನಿಪಿ-9 ಎಂದು, ಪಿಎಸ್ಐ ಅಫಜಲಪೂರ ರವರಿಗೆ ನೀಡಿದ ಅರ್ಜಿಯ ದೃಡೀಕೃತ ಪ್ರತಿಯನ್ನು ನಿಪಿ-10 ಎಂದು, ಪ್ರಾದೇಶಿಕ ಆಯುಕ್ತರು ಕಲಬುರಗಿ ರವರಿಗೆ ನೀಡಿದ ಅರ್ಜಿಯ ದೃಡೀಕೃತ ಪ್ರತಿಯನ್ನು ನಿಪಿ-11 ಎಂದು, ಮೂರು ಪಹಣಿ

ಪತ್ರಿಕೆಗಳನ್ನು ನಿಪಿ-12 ರಿಂದ 14 ಎಂದು, ಎರಡು ಖರೀದಿ ಪತ್ರಗಳನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ವಿನಂತಿ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ